ಕಾಮಗಾರಿಯನ್ನು ವಹಿಸಲಾಗಿದ್ದು, ಕೆಲಸವು ಪ್ರಗತಿಯಲ್ಲಿರುತ್ತದೆ. ಕರಾರಿನಂತೆ ಕೆಲಸವನ್ನು ದಿನಾಂಕ 16. 12. 1998 ರೊಳಗೆ ಪೂರೈಸಬೇಕಿದ್ದು, ಇದರಂತೆ ಕ್ರಮ ಕೈಗೊಳ್ಳಲಾಗುವುದು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ಕಛೇರಿ ಪ್ರಾರಂಭ

20.1 (414) ಶ್ರೀ ಜೆ. ಸಿ. ಮಾಧುಸ್ವಾಮಿ, (ಚಿಕ್ಕನಾಯಕನ ಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚಿಕ್ಕನಾಯಕನಹಳ್ಳಿಯಲ್ಲಿ ಲೋಕೋಪಯೋಗಿ ಇಲಾಖೆ ಕಛೇರಿ ಅಸ್ತಿತ್ವದಲ್ಲಿ ಇದೆಯೇ, ಹಾಗಿದ್ದಲ್ಲಿ ಮರು ಆರಂಭ ಮಾಡಲಾಗುವುದೇ?

ಆ) ಅಲ್ಲಿ ಕಛೇರಿ ಅಸ್ತಿತ್ವದಲ್ಲಿದೆಯೆಂದು ಈ ಹಿಂದೆ ಮಾಹಿತಿ ಒದಗಿಸಿದ್ದು ನಿಜವೇ?

ಇ) ಹಾಗಿದ್ದಲ್ಲಿ ಒಂದು ವರ್ಷವಾದರೂ ಕಛೇರಿ ಅಸ್ತಿತ್ವಕ್ಕೆ ಬರದಿರಲು ಕಾರಣವೇನು?

ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು) :

ಅ) ಚಿಕ್ಕನಾಯಕನಹಳ್ಳಿಯಲ್ಲಿ ಲೋಕೋಪಯೋಗಿ ಇಲಾಖೆ ಉಪ ವಿಭಾಗ ಅಸ್ತಿತ್ವದಲ್ಲಿ ಇರುವುದಿಲ್ಲ. ಆದ್ಯಾಗ್ಯೂ ಲೋಕೋಪಯೋಗಿ ಇಲಾಖೆಯ ಉಪ ವಿಭಾಗವನ್ನು ತಡೆಯಲು ಕ್ರಮ ಕೈಗೊಳ್ಳಲಾಗುವುದು.

ಆ) ಆ ರೀತಿ ಮಾಹಿತಿ ಒದಗಿಸಿರುವುದು ಇಲಾಖಾ ಗಮನಕ್ಕೆ ಬಂದಿರುವುದಿಲ್ಲ

ಇ) ಸಣ್ಣ ನೀರಾವರಿ ಇಲಾಖೆಯವರು ತಮ್ಮ ಆದೇಶ ದಿನಾಂಕ 19-5-97 ರಲ್ಲಿ ಸಣ್ಣ ನೀರಾವರಿ ಉಪ ವಿಭಾಗ, ಕಡೂರನ್ನು ಚಿಕ್ಕ ಮಂಗಳೂರಿಗೆ ವರ್ಗಾಯಿಸಿರುತ್ತಾರೆ. ಸದರಿ ಉಪ ವಿಭಾಗವನ್ನು ಅನಂತರ ನೀರಾವರಿ ಇಲಾಖೆ ಆದೇಶ ದಿನಾಂಕ 21-3-97ರ ಅನ್ವಯ ಚಿಕ್ಕನಾಯಕನಹಳ್ಳಿಗೆ ಸ್ಥಳಾಂತರಿಸಿಲ್ಲವಾದ ಕಾರಣ ಅಸ್ತಿತ್ವಕ್ಕೆ ಬಂದಿರುವುದಿಲ್ಲ.

ನಬಾರ್ಡ್, ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳಿಗೆ ಹಣ ಬಿಡುಗಡೆ

202 (415) ಶ್ರೀ ಜೆ. ಸಿ. ಮಾಧೂಸ್ವಾಮಿ(ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ನಬಾರ್ಡ್ ಮತ್ತು ವಿಶ್ವ ಬ್ಯಾಂಕ್ ಯೋಜನೆಯ ಅಡಿಯಲ್ಲಿ ರಸ್ತೆ ಕಾಮಗಾರಿಗಳನ್ನು ನಿರ್ವಹಿಸಲು ಇರುವ ನೀತಿ ನಿಯಮಗಳೇನು?

ಆ) ಯಾವ ಯಾವ ಮತ್ತು ಕ್ಷೇತ್ರಗಳಲ್ಲಿ ಎಷ್ಟೆಷ್ಟು ಹಣ ಒದಗಿಸಲಾಗಿದೆ?

ಇ) ಚಿಕ್ಕನಾಯಕನಹಳ್ಳಿ ಮತ್ತು ಕ್ಷೇತ್ರಕ್ಕೆ ಮಂಜೂರು ಮಾಡಿರುವ ಹಣವೆಷ್ಟು?

ಈ) ಹಾನಗಲ್ ಕ್ಷೇತ್ರ ಹಾಗೂ ಧಾರವಾಡ ಜಿಲ್ಲೆಗೆ ಒದಗಿಸಿರುವ ಹಣವೆಷ್ಟು?